ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ –೧೬೧	ಬೆಂಗಳೂರು, ಗುರುವಾರ, ೨೧, ಮೇ, ೨೦೨೬ (ವೈಶಾಖ, ೩೧, ಶಕವರ್ಷ, ೧೯೪೮)	ಸಂಚಿಕೆ ೯೬
Volume - 161	BENGALURU, THURSDAY, 21, MAY, 2026 (VAISHAKHA , 31, SHAKAVARSHA, 1948)	Issue 96

ಭಾಗ ೫

ಸರ್ಕಾರದ ಮತ್ತು ಖಾಸಗಿ ಜಾಹೀರಾತುಗಳು, ಲೋಕಸೇವಾ ಆಯೋಗದ ಜಾಹೀರಾತುಗಳು, ನೇಮಕಾತಿ ಸಮಿತಿಗಳ ಜಾಹೀರಾತುಗಳು

ಕರ್ನಾಟಕ ಸರ್ಕಾರ

ಸಂಖ್ಯೆ:ಇಡಿ 132 ಡಿಸಿಇ 2026(ಇ)

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಡಾ. ಬಿ ಆರ್ ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:30-4-2026

ಅಧಿಸೂಚನೆ

ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 92 ಡಿಸಿಇ 2023(ಇ), ದಿನಾಂಕ:03.11.2023ರಂದು ಕರ್ನಾಟಕ ಶಿಕ್ಷಣ ಇಲಾಖೆ ಸೇವೆಗಳು (ಕಾಲೇಜು ಶಿಕ್ಷಣ ಇಲಾಖೆ) (ನೇಮಕಾತಿ) (ವಿಶೇಷ) ನಿಯಮಗಳು, 2020ರನ್ವಯ ಕಾಲೇಜು ಶಿಕ್ಷಣ ಇಲಾಖೆಯ ವ್ಯಾಪ್ತಿಗೆ ಒಳಪಡುವ ಸರ್ಕಾರಿ ಪದವಿ ಕಾಲೇಜುಗಳಲ್ಲಿ ಖಾಲಿ ಇರುವ ಮತ್ತು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳಿಗೆ ಅಂತಿಮ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗಿತ್ತು. ಸದರಿ ಆಯ್ಕೆ ಪಟ್ಟಿಯಲ್ಲಿ ವಿವಿಧ ವಿಷಯಗಳಲ್ಲಿ ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಆಯ್ಕೆಯಾದ ಅಭ್ಯರ್ಥಿಗಳ ನೇಮಕಾತಿಯನ್ನು ವಿವಿಧ ಕಾರಣಗಳಿಂದ ಅಭ್ಯರ್ಥಿಗಳ ಅಭ್ಯರ್ಥಿತನವನ್ನು ಸರ್ಕಾರದ ಆದೇಶ ಸಂಖ್ಯೆ:ಇಡಿ 250 ಡಿಸಿಇ 2025(ಇ), ದಿನಾಂಕ:30.01.2026ರಂದು ರದ್ದುಪಡಿಸಿ ಆದೇಶಿಸಲಾಗಿತ್ತು.

ಮೇಲ್ಕಂಡಂತೆ ರದ್ದುಪಡಿಸಲಾದ ಅಭ್ಯರ್ಥಿಗಳ ಬದಲಾಗಿ ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಬೆಂಗಳೂರು ಇವರ ಪತ್ರ ಸಂಖ್ಯೆ: ಇಡಿ/ಕೆಇಎ/ಆಡಳಿತ/ಸಿಆರ್-19/2021-22, ದಿನಾಂಕ:20.03.2026ರಲ್ಲಿ 1:2 ಅನುಪಾತದಲ್ಲಿ ಹೆಚ್ಚುವರಿ ಆಯ್ಕೆಪಟ್ಟಿಯನ್ನು ಸಲ್ಲಿಸಿದ್ದು, ಅದರನ್ವಯ 1:2 ಅನುಪಾತದ ವಿವಿಧ ವಿಷಯಗಳ ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಈ ಕೆಳಕಂಡ ಹೆಚ್ಚುವರಿ ಆಯ್ಕೆ ಪಟ್ಟಿಯನ್ನು ಮೂಲ ದಾಖಲೆಗಳ ಪರಿಶೀಲನೆಯ ಷರತ್ತಿಗೆ ಒಳಪಟ್ಟು ಈ ಮೂಲಕ ಪ್ರಕಟಿಸಿದೆ.

ಈ ಮೂಲಕ ಪ್ರಕಟಿಸಲಾದ ಆಯ್ಕೆ ಪಟ್ಟಿಯು ಹಾಗೂ ಅದರನ್ವಯ ಕೈಗೊಳ್ಳುವ ನೇಮಕಾತಿ ಪ್ರಕ್ರಿಯೆಯು ನೇಮಕಾತಿಗಳಿಗೆ ಸಂಬಂಧಿಸಿದಂತೆ ಸರ್ಕಾರವು ಕಾಲಕಾಲಕ್ಕೆ ಹೊರಡಿಸಿರುವ ಅಧಿನಿಯಮಗಳು/ಆದೇಶಗಳು/ಅಧಿಸೂಚನೆಗಳು/ಸುತ್ತೋಲೆಗಳಲ್ಲಿನ ಷರತ್ತು, ನಿಬಂಧನೆಗಳಿಗೆ ಒಳಪಟ್ಟಿರುತ್ತದೆ ಹಾಗೂ ಈ ಬಗ್ಗೆ ಮಾನ್ಯ ಸಕ್ಷಮ ನ್ಯಾಯಾಲಯಗಳು ನೀಡುವ/ನೀಡಿರುವ ತೀರ್ಪುಗಳಿಗೆ/ಆದೇಶಗಳಿಗೆ ಒಳಪಟ್ಟಿರುತ್ತದೆ.

ಈ ಮೂಲಕ ಪ್ರಕಟಿಸಲಾದ ಅಂತಿಮ ಆಯ್ಕೆ ಪಟ್ಟಿಯಲ್ಲಿನ ಅಭ್ಯರ್ಥಿಗಳ ಪೂರ್ವಚರಿತ್ರೆಯು ತೃಪ್ತಿಕರವಾಗಿರುವ ಕುರಿತಂತೆ ಮತ್ತು ಇತರೆ ಅವಶ್ಯಕವೆನಿಸುವ ಅಗತ್ಯ ವಿಚಾರಣೆ/ತಪಾಸಣೆಯ ನಂತರ ಅಭ್ಯರ್ಥಿತನವು ತೃಪ್ತಿಕರವಾಗಿದೆ ಎಂದು ನೇಮಕಾತಿ ಪ್ರಾಧಿಕಾರ ತೀರ್ಮಾನಿಸಿದಲ್ಲಿ ಮಾತ್ರ ಅಭ್ಯರ್ಥಿಗಳು ನೇಮಕಾತಿ ಆದೇಶಕ್ಕೆ ಅರ್ಹರಾಗುತ್ತಾರೆ ಹೊರತು, ಅಂತಿಮ ಆಯ್ಕೆ ಪಟ್ಟಿಯಲ್ಲಿ ಹೆಸರು ನಮೂದಾಗಿದೆ ಎಂಬ ಕಾರಣದಿಂದಾಗಿ ಅಭ್ಯರ್ಥಿಯು ಯಾವುದೇ ಹಕ್ಕನ್ನು ಹೊಂದಿದಂತಾಗುವುದಿಲ್ಲ.

Additional candidates list as 1: 2 ratio											
Sl. No	**Reg No**	**Name**	**Selected Subject**	**Selected Category**	**Score**		**Reg No**	**Name**	**Selected Subject**	**Selected Category**	**Score**
1	U3837	MANUKUMAR H N	ENG-English	SCB	60.75	**Next Eligible Candidate List**	--	--	--	--	--
2	U2053	PUSHPALATHA P	PHY-Physics	SCG	125.75		J1757	SHIVAPRASAD CHALAWADI	PHY-Physics	SCG	124.5
3	A7740	IMRAN PASHA	COM-Commerce	2BG	126.75		F0685	NAZIYA IQBAL PATVEGAR	COM-Commerce	2BG	126.5
4	U1872	MURALIMOHANA P T	MAN-Management	ST-B-Conv-Loco	48		--	--	--	--	--
5	J3712	NIRUPA VERNEKAR	BOT-Botany	2AG	167.75		J2992	MAKARANDA HANMATTEKAR	BOT-Botany	2AG	167.25
6	U1732	ANASUYA	BOT-Botany	STH	143.5		A1858	NANDINI M BAGANAL	BOT-Botany	STH	133
7	X2993	THIPPERUDRAPPA E	ECO-Economics	GMI	68.25		--	--	--	--	--
8	J0716	JYOTI GOVANKOPPA	LAW-Law	GM	128.75		A5757	RAKSHA PRAKASH	LAW-Law	GM	127.5
9	X2997	RAGHUNATHA C	POL-Political Science	SCR	131.75		F1069	NINGAPPA HUBBALLI	POL-Political Science	SCR	130.75
10	J3350	VIDYA VENKATRAMAN NAIK	ZOO-Zoology	2AW	167.5		U1724	SARITA M	ZOO-Zoology	2AW	165.25
11	A1138	SAVITHRI D D	COM-Commerce	1W	121.5		J5433	PALLAVI NAGAPPA PATGAR	COM-Commerce	1W	120.75
12	U1381	SUMAN T D	COM-Commerce	2AG	133.25		A4383	AKSHAYA	COM-Commerce	2AG	133.25
13	A8364	AJITHA KUMAR	COP-Computer Science	2AR	141		X1321	DINESH KUMAR H S	COP-Computer Science	2AR	125.25
14	A1579	DEVIKA R M	ECO-Economics	GMW	138.75		A3551	SOUNDARYA G	ECO-Economics	GMW	136.25
15	G3204	SHRIMANT	SOC-Sociology	SCH	128.25		J2039	VERUPANNA	SOC-Sociology	SCH	121.75
16	U2506	NANDINI B E	COM-Commerce	GM	144.25		G0747	GADDAMEEDHI DHANRAJ	COM-Commerce	GMX-Conv	142.75
17	J4152	LAKSHMI K	ECO-Economics	GMHW	117.25		G1809	AMBIKA K C	ECO-Economics	GMHW	113.75
18	A0819	AZRA ZAREEN	ECO-Economics	GMW	137.5		A3948	MANJULA C	ECO-Economics	GMW	135
19	J3789	MANALI B MOMAYA	HIS-History	GMW	128.75		U2768	VIDYASHREE K M	HIS-History	GMW	126.5
20	A8613	RAMESHA M T	KAN-Kannada	SCG	169.75		X0718	HAREESHA R	KAN-Kannada	SCG	168.5
21	A0858	PAVITHRA	LAW-Law	SCG	103.75		U3297	RAMESHA K	LAW-Law	SCG	101.75
22	U5395	VIDYA K N	MAT-Mathematics	GMR	109		J5390	MALLAPPA PANDAPPA MELLIKERI	MAT-Mathematics	GMR	105.5
23	U1235	KUSHALA R	MAT-Mathematics	GM	113.75		U2185	SHIBUANDIA	MAT-Mathematics	GM	113.25
24	U0224	MANJUNATHA D G	POL-Political Science	GM	151.25		X2397	SHASHIDHARA K H	POL-Political Science	GM	146.5
25	A6512	PRASAD B S	COP-Computer Science	GM	151.25		J1333	SMITA R KULLOLLI	COP-Computer Science	GM	150.25

26	U6350	SPHOORTI	EDU-Education	GM	175.25		F0060	MAGADUM HANAMANT ANNAPPA	EDU-Education	GM	169.75
27	U4188	ANU P M	HIS-History	GMW	126.75		A8104	NAGAMBIKA C P	HIS-History	GMW	126.25
28	G1911	SHAKUNTHALA S	MAT-Mathematics	SCHW	44.75		G1913	SAVITA	MAT-Mathematics	SCHW	41.5
29	M1504	SHASHANKA KULAMARVA	MAT-Mathematics	GM	113.75		A0134	SUMANTH BHARADWAJ H S	MAT-Mathematics	GM	113
30	A3807	LATHA D N	MAT-Mathematics	SCR	67		G2781	HUSENAPPA	MAT-Mathematics	SCR	66.5
31	A3889	RENUKA M K	CHE-Chemistry	GMW	145		A8250	DESAI NIVEDITA RATNAKAR	CHE-Chemistry	GMW	144.75
32	X3597	VASANTHA KUMARA H G	COM-Commerce	GM	142.75		M0522	ANANYALAKSHMI	COM-Commerce	GMX-Conv	142.75
33	M0401	ASHMA YOIGINE DSOUZA	HIN-Hindi	GMW	159.25		G1533	SUNGARE MAHADEVI VISHWANATH	HIN-Hindi	GMW	158.75
34	G2417	LAXMIDEVI	HIN-Hindi	SCW	125.25		J4199	LALITABAI C LAMANI	HIN-Hindi	SCW	118.75
35	J5496	SURESHARADDI SOMANNAVAR	HIS-History	GM	151.25		X2638	LOHITHKUMAR L	HIS-History	GM	151
36	M0839	AKSHATHA A P	LAW-Law	3AW	124.5		A4964	NANDINI J	LAW-Law	3AW	112.5
37	F1487	DIPIKARANI ALIAS YAMNOTRI LOKARE	POL-Political Science	SCW	100		A8453	SANDHYARANI GANAPATI VANDIGE	POL-Political Science	SCW	97
38	J0457	MALLAPPA	CHE-Chemistry	GMHK	125.75		J1771	SOMASHEKHARA B	CHE-Chemistry	GMHK	116.5

ಅಭ್ಯರ್ಥಿಗಳ ಅಭ್ಯರ್ಥಿತನವು ಮತ್ತು ನೇಮಕಾತಿ ಆದೇಶ ಪಡೆಯಲು ಅರ್ಹತೆಯು ಈ ಕೆಳಕಂಡ ಷರತ್ತುಗಳಿಗೊಳಪಟ್ಟಿದೆ.

1. ಸದರಿ ನೇಮಕಾತಿ ಪ್ರಕ್ರಿಯೆಗೆ ಸಂಬಂಧಿಸಿದಂತೆ ಮಾನ್ಯ ಕರ್ನಾಟಕ ಆಡಳಿತ ನ್ಯಾಯಮಂಡಳಿ/ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿರುವ ಅರ್ಜಿ/ರಿಟ್ ಅರ್ಜಿಗಳಲ್ಲಿ ಆಗುವ ಅಂತಿಮ ತೀರ್ಮಾನ;
2. ಅಭ್ಯರ್ಥಿಗಳ ಶೈಕ್ಷಣಿಕ ಅರ್ಹತೆಯ ದಾಖಲೆಗಳಲ್ಲಿ ಯಾವುದೇ ನ್ಯೂನತೆಗಳು ಕಂಡು ಬಂದಲ್ಲಿ ಅವರ ಅಭ್ಯರ್ಥಿತನ ತಂತಾನೆ ರದ್ದಾಗುತ್ತದೆ;
3. ಅಭ್ಯರ್ಥಿಗಳ ಮೀಸಲಾತಿ, ಜಾತಿ ಮತ್ತು ಆದಾಯಕ್ಕೆ ಸಂಬಂಧಿಸಿದ ದಾಖಲೆಗಳು ಸಿಂದುವಾಗಿವೆ ಎಂದು ಸಂಬಂಧಪಟ್ಟ ಇಲಾಖೆ/ಪ್ರಾಧಿಕಾರವು ದೃಢೀಕರಿಸಬೇಕು;
4. ಅಭ್ಯರ್ಥಿಗಳ ಅಭ್ಯರ್ಥಿತನ ಮತ್ತು ಆಯ್ಕೆಗೆ ಸಂಬಂಧಿಸಿದಂತೆ ನೇಮಕಾತಿ ಪ್ರಾಧಿಕಾರದ ತೀರ್ಮಾನವು ಅಂತಿಮವಾಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಜಬೀನ್ ತಾಜ್ ಜಿ. ಎಂ)
ಸರ್ಕಾರದ ಅಧೀನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ
(ಕಾಲೇಜು ಶಿಕ್ಷಣ & ಸಮನ್ವಯ).

PR-33

ಕರ್ನಾಟಕ ಸರ್ಕಾರ

ಸಂಖ್ಯೆ: ಇಡಿ 92 ಡಿಸಿಇ 2023(ಇ)

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಡಾ. ಬಿ ಆರ್ ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:01-04-2026.

ಅಧಿಸೂಚನೆ

ಕಾಲೇಜು ಶಿಕ್ಷಣ ಇಲಾಖೆಯ ಆಡಳಿತ ವ್ಯಾಪ್ತಿಗೆ ಒಳಪಡುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಖಾಲಿ ಇರುವ ವಿವಿಧ ವಿಷಯಗಳ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳ ನೇರ ನೇಮಕಾತಿಗೆ ಆಯ್ಕೆ ಪ್ರಾಧಿಕಾರವಾದ ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಸರ್ಕಾರಕ್ಕೆ ಸಲ್ಲಿಸಿದ ಅಂತಿಮ ಆಯ್ಕೆ ಪಟ್ಟಿಯನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 92 ಡಿಸಿಇ 2023(ಇ), ದಿನಾಂಕ:03.11.2023ರಲ್ಲಿ ಪ್ರಕಟಿಸಲಾಗಿದೆ. ಕರ್ನಾಟಕ ಶಿಕ್ಷಣ ಇಲಾಖೆ ಸೇವೆಗಳು (ಕಾಲೇಜು ಶಿಕ್ಷಣ ಇಲಾಖೆ) (ಸಹಾಯಕ ಪ್ರಾಧ್ಯಾಪಕರ ನೇಮಕಾತಿ) (ವಿಶೇಷ) ನಿಯಮಗಳು, 2020 ನಿಯಮ 9ರ ಉಪನಿಯಮ (2) ಮತ್ತು (3) ರನ್ವಯ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳಿಗೆ ಅಂತಿಮ ಆಯ್ಕೆ ಪಟ್ಟಿಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳ ಅರ್ಹತೆಯ ದೃಢೀಕರಣಕ್ಕೆ ಸಂಬಂಧಿಸಿದಂತೆ ಅಗತ್ಯ ವಿಚಾರಣೆಗಳು ಪೂರ್ಣಗೊಂಡಿರುವ ಈ ಕೆಳಕಂಡ ಅಭ್ಯರ್ಥಿಗಳನ್ನು ವೇತನ ಶ್ರೇಣಿ ರೂ.57700-182400(ಯುಜಿಸಿ ವೇತನ ಶ್ರೇಣಿ)ರ ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ನೇಮಿಸಿ ಆದೇಶಿಸಿದೆ.

ವಿಷಯ: HIS-History
ಹುದ್ದೆ: Regular
ವರ್ಗ: NON-HK (ಸಾಮಾನ್ಯ ಮಿಕ್ಕುಳಿದ ವರ್ಗ)

Sl. No.	Sl. No. of Govt. Notification no: ED 92 DCE 2023, Dated: 03.11.2023.	NAME	DOB	SELECTED CATEGORY
1	30	DEVANANDANA R K	22-MAY-84	GMR

ವಿಷಯ: PHY-Physics
ಹುದ್ದೆ: Regular
ವರ್ಗ: NON-HK (ಸಾಮಾನ್ಯ ಮಿಕ್ಕುಳಿದ ವರ್ಗ)

Sl. No.	Sl. No. of Govt. Revised Notification no: ED 299 DCE 2024, Dated:15.11.2025.	NAME	DOB	SELECTED CATEGORY
1	40	SUPRIYA BABA NAIK	01-APR-93	2AW
2	56	JHANSI RANI M	18-MAY-96	SCW

ವಿಷಯ: MAT-Mathematics

ಹುದ್ದೆ: Regular

ವರ್ಗ: NON-HK (ಸಾಮಾನ್ಯ ಮಿಕ್ಕುಳಿದ ವರ್ಗ)

Sl. No.	Sl. No. of Govt. Notification no: ED 92 DCE 2023, Dated: 03.11.2023.	NAME	DOB	SELECTED CATEGORY
1	49	SATHOSHA KANCHAGARTTI	10-JUN-82	GM-PH-H

ಈ ಅಧಿಸೂಚನೆಯ ಪ್ರತಿಯನ್ನು ಮೇಲೆ ನಮೂದಿಸಿರುವ ಅಭ್ಯರ್ಥಿಗಳ ಖಾಯಂ ವಿಳಾಸಕ್ಕೆ ಪ್ರತ್ಯೇಕವಾಗಿ ನೋಂದಣಿ ಅಂಚೆಯ ಮೂಲಕ ರವಾನಿಸಲು ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ ಇವರು ಕ್ರಮವಹಿಸುವುದು.

ಸದರಿ ಹುದ್ದೆಗೆ ನೇಮಕಗೊಂಡ ಅಭ್ಯರ್ಥಿಗಳು ಈ ಆದೇಶ ತಲುಪಿದ 15 (ಹದಿನೈದು) ದಿನಗಳೊಳಗೆ ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಉನ್ನತ ಶಿಕ್ಷಣ ಸೌಧ, ಶೇಷಾದ್ರಿ ರಸ್ತೆ, ಬೆಂಗಳೂರು ಇವರಲ್ಲಿ **ತೆರಳಿ, ಕೌನ್ಸಿಲಿಂಗ್ ಪ್ರಕ್ರಿಯೆ ನಡೆಸಿ, ಸ್ಥಳ ನಿಯುಕ್ತಿಗೊಳಿಸುವಂತೆ ಮನವಿ ಸಲ್ಲಿಸುವುದು.** ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ ಇವರು ನಿಯಮಾನುಸಾರ ಜೇಷ್ಠತೆಯ ಆಧಾರದ ಮೇಲೆ ಕೌನ್ಸಿಲಿಂಗ್ ಪ್ರಕ್ರಿಯೆಯನ್ನು ನಡೆಸಿ ಅಭ್ಯರ್ಥಿಗೆ ಸ್ಥಳನಿಯುಕ್ತಿ ಆದೇಶವನ್ನು ನೀಡುವುದು. ಅಭ್ಯರ್ಥಿಗಳು ಸ್ಥಳ ನಿಯುಕ್ತಿಗೊಳಿಸಿದ ಕಾಲೇಜಿನಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಂಡ ದಿನಾಂಕದಿಂದ ವೇತನ ಹಾಗೂ ಇತರ ಭತ್ಯೆಗಳನ್ನು ಪಡೆಯಲು ಅರ್ಹರಿರುತ್ತಾರೆ.

ಸರ್ಕಾರದ ಪೂರ್ವಾನುಮತಿ ಪಡೆಯದೆ ನಿಗಧಿತ ಅವಧಿಯೊಳಗೆ ವರದಿ ಮಾಡಿಕೊಳ್ಳಲು ವಿಫಲರಾಗುವ ಅಭ್ಯರ್ಥಿಯ ನೇಮಕಾತಿ ಆದೇಶವು ತಾನಾಗಿಯೇ ಅನೂರ್ಜಿತವಾಗುತ್ತದೆ.

ಷರತ್ತುಗಳು:

1. ಇದು ಸ್ಪರ್ಧಾತ್ಮಕ ಪರೀಕ್ಷೆಯ ಆಧಾರದ ಮೇಲೆ ಮಾಡಿರುವ ನೇರ ನೇಮಕಾತಿಯಾಗಿರುವುದರಿಂದ ಕರ್ನಾಟಕ ಶಿಕ್ಷಣ ಇಲಾಖೆ ಸೇವೆಗಳು (ಕಾಲೇಜು ಶಿಕ್ಷಣ ಇಲಾಖೆ) (ಸಹಾಯಕ ಪ್ರಾಧ್ಯಾಪಕರ ನೇಮಕಾತಿ) (ವಿಶೇಷ) ನಿಯಮಗಳು, 2020 ರನ್ವಯ ಹಾಗೂ ಕರ್ನಾಟಕ ನಾಗರಿಕ ಸೇವಾ (ಜ್ಯೇಷ್ಠತೆ) ನಿಯಮಗಳು, 1957ರ ನಿಯಮ(5)ರನ್ವಯ ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ 92 ಡಿಸಿಇ 2023 (ಇ) ದಿನಾಂಕ:03.11.2023 ರಲ್ಲಿ ಪ್ರಕಟಿಸಿರುವ ಅಂತಿಮ ಆಯ್ಕೆ ಪಟ್ಟಿಯಲ್ಲಿನ ಜೇಷ್ಠತೆಯು ಅಂತಿಮವಾಗಿರುತ್ತದೆ.
2. ದಿನಾಂಕ:03.11.2023ರಂದು ಪ್ರಕಟಿಸಿರುವ ಅಂತಿಮ ಆಯ್ಕೆ ಪಟ್ಟಿಯಲ್ಲಿನ ಇನ್ನುಳಿದ ಅರ್ಹ ಅಭ್ಯರ್ಥಿಗಳಿಗೆ ಸಂಬಂಧಿಸಿದಂತೆ ಅಗತ್ಯ ವಿಚಾರಣೆಗಳು ತೃಪ್ತಿಕರವಾಗಿ ಪೂರ್ಣಗೊಂಡ ನಂತರ ಪ್ರತ್ಯೇಕ ನೇಮಕಾತಿ ಆದೇಶ ಹೊರಡಿಸಲಾಗುವುದು. ಅಂತಹ ಅಭ್ಯರ್ಥಿಗಳ ಅರ್ಹತೆ/ಜೇಷ್ಠತೆಗೆ ಯಾವುದೇ ಬಾಧೆಯಾಗುವುದಿಲ್ಲ. ಯಾವುದೇ ಅಭ್ಯರ್ಥಿಯು ಕರ್ತವ್ಯಕ್ಕೆ ಹಾಜರಾದ ದಿನಾಂಕವನ್ನಾಧರಿಸಿ ಜೇಷ್ಠತೆಯನ್ನು ಕ್ಲೇಮು ಮಾಡುವ ಹಕ್ಕುಳ್ಳವನಾಗಿರುವುದಿಲ್ಲ.
3. ನೇಮಕಗೊಂಡ ಅಭ್ಯರ್ಥಿಗಳು ಸ್ಥಳನಿಯುಕ್ತಿಗೊಳಿಸಿದ ಕಾಲೇಜಿನ ಪ್ರಾಂಶುಪಾಲರ ಸಮಕ್ಷಮದಲ್ಲಿ ಕಾರ್ಯವರದಿ ಮಾಡಿಕೊಳ್ಳುವ ಸಮಯದಲ್ಲಿ ತಮ್ಮ ವಿದ್ಯಾರ್ಹತೆಗೆ ಸಂಬಂಧಪಟ್ಟ ಮೂಲ ದಾಖಲೆಗಳನ್ನು ಹಾಜರುಪಡಿಸತಕ್ಕದ್ದು.

4. ಈ ನೇಮಕಾತಿಯು ಸ್ಥಳನಿಯುಕ್ತಿಗೊಳಿಸಿದ ಹುದ್ದೆಯಲ್ಲಿ ಕರ್ತವ್ಯಕ್ಕೆ ಹಾಜರಾದ ದಿನಾಂಕದಿಂದ ಎರಡು ವರ್ಷಗಳ ಪರೀಕ್ಷಾರ್ಥ ಅವಧಿಯನ್ನು ಅಭ್ಯರ್ಥಿಯು ತೃಪ್ತಿಕರವಾಗಿ ಪೂರೈಸುವ ಷರತ್ತಿಗೊಳಪಟ್ಟಿರುತ್ತದೆ.
5. ಅಭ್ಯರ್ಥಿಯು ಪರೀಕ್ಷಾರ್ಥ ಅವಧಿಯಲ್ಲಿ ನಿಗದಿಪಡಿಸಿರುವ ಇಲಾಖಾ ಪರೀಕ್ಷೆಗಳಲ್ಲಿ ಉತ್ತೀರ್ಣರಾಗತಕ್ಕದ್ದು.
6. ನೇಮಕಾತಿಗೊಂಡ ಅಭ್ಯರ್ಥಿಗಳು ಕರ್ನಾಟಕ ಸಿವಿಲ್ ಸೇವೆಗಳು (ಕಂಪ್ಯೂಟರ್ ಸಾಕ್ಷಾರತಾ ಪರೀಕ್ಷೆ) ನಿಯಮಗಳು, 2012 ರನ್ವಯ ಹಾಗೂ ಸದರಿ ನಿಯಮಗಳಿಗೆ ಸರ್ಕಾರವು ಕಾಲ ಕಾಲಕ್ಕೆ ಹೊರಡಿಸಿರುವ/ಹೊರಡಿಸುವ ನಿಯಮಗಳನ್ವಯ ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯಲ್ಲಿ ಉತ್ತೀರ್ಣರಾಗುವುದು ಕಡ್ಡಾಯವಾಗಿರುತ್ತದೆ.
7. ನೇಮಕಗೊಂಡ ಅಭ್ಯರ್ಥಿಗಳಿಗಾಗಿ ಕೈಗೊಳ್ಳಲಾಗುವ ಫೌಂಡೇಶನ್ ಕೋರ್ಸ್‌ಗೆ (ಬುನಾದಿ ತರಬೇತಿ) ಹಾಜರಾಗುವುದು ಕಡ್ಡಾಯವಾಗಿರುತ್ತದೆ.
8. ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಅವಶ್ಯಕತೆ ಇರುವ ಓರಿಯಂಟೇಷನ್ ಮತ್ತು ರೆಫ್ರೆಶರ್ ಕೋರ್ಸ್ ತರಬೇತಿಯನ್ನು ಪೂರೈಸತಕ್ಕದ್ದು.
9. ಅಭ್ಯರ್ಥಿಯು ಸ್ಥಳನಿಯುಕ್ತಿಗೊಳಿಸಿದ ಕಾಲೇಜಿನಲ್ಲಿ ಕರ್ತವ್ಯಕ್ಕೆ ಹಾಜರಾದ ದಿನಾಂಕದಿಂದ ನಿಯಮಾನುಸಾರ ವೇತನ, ಭತ್ಯೆ ಇತ್ಯಾದಿ ಪಡೆಯಲು ಅರ್ಹರಿರುತ್ತಾರೆ.
10. ಅಭ್ಯರ್ಥಿಗಳು ಕಾರ್ಯವರದಿ ಮಾಡಿಕೊಳ್ಳಲು ಹಾಗೂ ಸ್ಥಳನಿಯುಕ್ತಿಗೊಳಿಸಿದ ಹುದ್ದೆಯಲ್ಲಿ ಕರ್ತವ್ಯಕ್ಕೆ ಹಾಜರಾಗಲು ಯಾವುದೇ ಭತ್ಯೆಗಳನ್ನು ಪಡೆಯಲು ಅರ್ಹರಿರುವುದಿಲ್ಲ.
11. ಸರ್ಕಾರದ ಆದೇಶ ಸಂಖ್ಯೆ ಎಫ್‌ಡಿ (ಎಸ್.ಪಿ.ಎಲ್) 04 ಪಿಇಟಿ 2005, ದಿನಾಂಕ: 31.03.2006ರಲ್ಲಿನ ಹೊಸ ಪಿಂಚಣಿ ಯೋಜನೆ (NPS) ವ್ಯಾಪ್ತಿಗೆ ಅನ್ವಯವಾಗುತ್ತದೆ.
12. ಈಗಾಗಲೇ ಸರ್ಕಾರಿ ಸೇವೆಯಲ್ಲಿರುವ ಸಿಬ್ಬಂದಿಗಳು ಕರ್ನಾಟಕ ನಾಗರಿಕ ಸೇವಾ ನಿಯಮಾವಳಿಗಳ ನಿಯಮ 252(ಬಿ) ರನ್ವಯ ಸೇವೆಯಿಂದ ಬಿಡುಗಡೆ ಹೊಂದಿ, ಸ್ಥಳ ನಿಯುಕ್ತಿಗೊಳಿಸಲಾದ ಕಾಲೇಜಿನಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳತಕ್ಕದ್ದು. ಈ ಬಗ್ಗೆ ಸಂಬಂಧಪಟ್ಟ ಕಾಲೇಜಿನ ಪ್ರಾಂಶುಪಾಲರು ದೃಢೀಕರಿಸತಕ್ಕದ್ದು.
13. ಅಭ್ಯರ್ಥಿಗಳು ನೀಡಿರುವ/ನೀಡುವ ಯಾವುದೇ ಮಾಹಿತಿ/ದಾಖಲಾತಿಗಳು ಯಾವುದೇ ಸಮಯದಲ್ಲಿ ತಪ್ಪು/ನಕಲಿ ಎಂದು ಕಂಡುಬಂದಲ್ಲಿ ಕರ್ನಾಟಕ ನಾಗರಿಕ ಸೇವಾ(ಸಾಮಾನ್ಯ ನೇಮಕಾತಿ) ನಿಯಮಗಳು 1977 ರ ನಿಯಮ 20 ರನ್ವಯ ಅಂತಹವರನ್ನು ಯಾವುದೇ ಮುನ್ಸೂಚನೆ ನೀಡದೇ ನೇಮಕಾತಿ ಆದೇಶವನ್ನು ರದ್ದುಪಡಿಸಿ, ತಕ್ಷಣದಿಂದಲೇ ಸೇವೆಯಿಂದ ತೆಗೆದು ಹಾಕಲು ಕ್ರಮ ಕೈಗೊಳ್ಳಲಾಗುವುದು.
14. ಪರೀಕ್ಷಾರ್ಥ ಅವಧಿಯಲ್ಲಿ ಯಾವುದೇ ವರ್ಗಾವಣೆಗೆ ಅವಕಾಶವಿರುವುದಿಲ್ಲ.
15. ನೇಮಕಾತಿ ಆದೇಶವನ್ನು ಪಡೆಯುವ ಸಂದರ್ಭದಲ್ಲಿ ಅಭ್ಯರ್ಥಿಯು ತಾನು ಒದಗಿಸಿರುವ ಎಲ್ಲಾ ಮಾಹಿತಿಯು ಸತ್ಯವೆಂದು ದೃಢೀಕರಣ ಪತ್ರ ಸಲ್ಲಿಸುವುದು.
16. ಒಬ್ಬರಿಗಿಂತ ಹೆಚ್ಚು ಪತ್ನಿ/ಪತಿಯೂ ಹೊಂದಿರುವುದಿಲ್ಲವೆಂದು ಅಭ್ಯರ್ಥಿಯಿಂದ ಮುಚ್ಚಳಿಕೆ ಪತ್ರ ಪಡೆಯುವುದು.
17. ಅಭ್ಯರ್ಥಿಯು ಕರ್ತವ್ಯಕ್ಕೆ ಹಾಜರಾಗುವ ಸಂದರ್ಭದಲ್ಲಿ ವಿದ್ಯಾರ್ಹತೆಯ ಬಗ್ಗೆ ಎಲ್ಲಾ ದಾಖಲಾತಿಗಳನ್ನು (SSLC/PUC/ಪದವಿ/ಸ್ನಾತಕೋತ್ತರ/ಬಿ.ಎಡ್/NET/SLET) ಹಾಗೂ ಜನ್ಮ ದಿನಾಂಕ ದೃಢೀಕರಿಸುವ ದಾಖಲಾತಿಗಳನ್ನು ಸಲ್ಲಿಸತಕ್ಕದ್ದು.

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297

18. ಅಭ್ಯರ್ಥಿಗಳು ಕಾಲೇಜು ಶಿಕ್ಷಣ ಇಲಾಖೆಯ ಎಲ್ಲಾ ನಿಯಮಗಳು/ಮಾರ್ಗಸೂಚಿಗಳಿಗೆ/ ಕೆ.ಸಿ.ಎಸ್.ಆರ್. ನಿಯಮಗಳಿಗೆ ಹಾಗೂ ಚಾಲ್ತಿಯಲ್ಲಿರುವ ಇತರೆ ಎಲ್ಲಾ ಸೇವಾ ನಿಯಮಗಳಿಗೆ ಬದ್ಧರಾಗಿರತಕ್ಕದ್ದು.
19. ಅಭ್ಯರ್ಥಿಯು ಭಾರತದ ಸಂವಿಧಾನದ ರೀತ್ಯಾ ನಿಷ್ಠೆಯ ಪ್ರಮಾಣ ವಚನ ಸ್ವೀಕರಿಸತಕ್ಕದ್ದು.
20. ಈ ನೇಮಕಾತಿ ಆದೇಶವು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಬಾಕಿ ಇರುವ ರಿಟ್ ಅರ್ಜಿಗಳ ಸಂಖ್ಯೆ:2034 / 2024, 1633 / 2024, 1900 / 2024, 1464 / 2024, 3455 / 2024, 5191 / 2024, 24247 / 2024 ರ ಅಂತಿಮ ಆದೇಶಕ್ಕೆ ಒಳಪಟ್ಟಿರುತ್ತದೆ ಹಾಗೂ ಸದರಿ ನೇಮಕಾತಿ ಅಧಿಸೂಚನೆಯ ಕುರಿತಂತೆ ಮಾನ್ಯ ಸರ್ವೋಚ್ಚ ನ್ಯಾಯಾಲಯ, ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಎಲ್ಲಾ ಪೀಠಗಳಲ್ಲಿ ಹಾಗೂ ಮಾನ್ಯ ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿಯ ಎಲ್ಲಾ ಪೀಠಗಳಲ್ಲಿ ದಾಖಲಾಗಿರುವ ರಿಟ್ ಅರ್ಜಿ/ಅರ್ಜಿಗಳಲ್ಲಿ ಮಾನ್ಯ ನ್ಯಾಯಾಲಯಗಳು ನೀಡುವ ಅಂತಿಮ ತೀರ್ಪಿನ ಷರತ್ತಿಗೆ ಒಳಪಟ್ಟಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಜಬೀನ್ ತಾಜ್ ಜಿ. ಎಂ)
ಸರ್ಕಾರದ ಅಧೀನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ
(ಕಾಲೇಜು ಶಿಕ್ಷಣ & ಸಮನ್ವಯ)

PR-34

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು–೫೬೯.

THAMMAIAH